**PW-3:** ರಾಮಚಂದ್ರ

ದಿನಾಂಕಃ **20.07.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರವಾಗಿ ಶ್ರೀ ಡಿ.ಪಿ.ಆರ್. ವಕೀಲರಿಂದಃ

1. ನಾನು 19 ವರ್ಷಗಳಿಂದ ಪತ್ರಬರಹಗಾರನಾಗಿ ಸಹಿ ಮಾಡುತ್ತಿದ್ದೇನೆ. ನಾವು ಕರಾರುಪತ್ರಗಳನ್ನು ಬರೆದಲ್ಲಿ ರಿಜಿಸ್ಟರ್ ನಲ್ಲಿ ಬರೆದುಕೊಳ್ಳುತ್ತೇವೆ ಎಂದರೆ ಸರಿ. ಪ್ರಸ್ತುತ ದಾವೆಯ ಕರಾರುಪತ್ರವನ್ನು ನಮೂದುಮಾಡಿಕೊಂಡಿರುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಕರಾರುಪತ್ರ ಬರೆಯಲು ಬೀಸಪ್ಪ ರವರು ಹೇಳಿರುತ್ತಾರೆ. ಬೀಸಪ್ಪ ರವರು ಎಲ್. ತಿಮ್ಮಾಪುರ ಗ್ರಾಮದವರು. ಅವರು ನನಗೆ ಮೊದಲು ಪರಿಚಿತರಿರಲಿಲ್ಲ. ಬೀಸಪ್ಪ ರವರನ್ನು ನೀವು ವೈಯಕ್ತಿಕವಾಗಿ ನೋಡಿಲ್ಲ ಎಂದರೆ ಸಾಕ್ಷಿಯು ಕರಾರುಪತ್ರ ದಿನ ನೋಡಿದ್ದೇನೆ ಎಂದು ಉತ್ತರಿಸುತ್ತಾರೆ. ನಾನು ಬರೆದಿರುವ ಕರಾರುಪತ್ರಗಳ ಪೈಕಿ ಕೆಲವು ನೆನಪಿನಲ್ಲಿರುತ್ತವೆ ಮತ್ತು ಕೆಲವು ನೆನಪಿನಲ್ಲಿ ಉಳಿಯುವುದಿಲ್ಲ.ಈ ಕರಾರುಪತ್ರ ಬರೆದ ಸಂದರ್ಭ ಬೀಸಪ್ಪ ರವರಿಗೆ 60-70 ವರ್ಷ ವಯಸ್ಸಾಗಿತ್ತು. ಸುರೇಶ್ ರವರಿಗೆ 30-35 ವರ್ಷ ವಯಸ್ಸಿದ್ದಿರಬಹುದು.

2. ಕರಾರುಪತ್ರ ಬರೆಯುವ ಸಲುವಾಗಿ 02.30 ರ ಸಮಯಕ್ಕೆ ಬಂದಿದ್ದರು. ಆ ಸಂರ್ಭ ಪಹಣಿ ಪತ್ರಿಕೆಯಲ್ಲಿ ಸರ್ಕಾರಿ ಪಡ ಎಂದು ಇದ್ದು ಆ ಸ್ವತ್ತನ್ನು ಮಾರಾಟಹಿ ಮಾಡಲು ಆಗುವುದಿಲ್ ಎಂದು ನಾನು ಹೇಳಿದ್ದು ಬೀಸಪ್ಪ ರವರು ಆ ಸ್ವತ್ತು ನನ್ನ ಸ್ವಯಾರ್ಜಿತವಾಗಿದ್ದು ಈ ಬಗ್ಗೆ ನಾನು ಪಡ ತೆಗೆಯುವ ಸಲುವಾಗಿ ಕಂದಾಯ ಇಲಾಖೆಗೆ ಅರ್ಜಿ ಸಲ್ಲಿಸಿದ್ದು ಮಾನ್ಯ ಉಚ್ಛ ನ್ಯಾಯಾಲಯದಲ್ಲಿಯೂ ಸಹ ಈ ಬಗ್ಗೆ ಅರ್ಜಿ ದಾಖಲಿಸಿರುತ್ತೇನೆ ಮತ್ತು ನನಗೆ ಆರೋಗ್ಯವಿರುವ ಕಾರಣ ಅವಶ್ಯಕತೆ ಇದ್ದು ಪಡ ತೆಗೆದ ನಂತರ ಪತ್ರ ಬರೆದುಕೊಡುತ್ತೇನೆ ಕ್ರಯಪತ್ರ ಬರೆದುಕೊಡುತ್ತೇನೆ ಎಂದು ಹೇಳಿ ಕರಾರುಪತ್ರ ಬರೆಯಲು ಹೇಳಿರುತ್ತಾರೆ ಎಂದು

ಉತ್ತರಿಸುತ್ತಾರೆ. ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಿರುವ ಬಗ್ಗೆ ದಾಖಲೆ ನೀಡಿರುವ ಬಗ್ಗೆ ಮೌಖಿಕವಾಗಿ ಹೇಳಿರುತ್ತೇನೆ. ಪಹಣಿಯಲ್ಲಿ ಪಡ ಎಂದು ನಮೂದಾಗಿದೆ. ನಾನು 2021 ರ ಚಾಲ್ತಿ ಪಹಣಿಯನ್ನು ನೋಡಿರುತ್ತೇನೆ. ಸ್ವತ್ತು ಮಾರಾಟಗಾರರ ಹೆಸರಿನಲ್ಲಿ ಇದ್ದಲ್ಲಿ ಮಾತ್ರ ಕರಾರುಪತ್ರ ಬರೆಯಲು ಬರುತ್ತದೆ ಎಂದರೆ ಸರಿ. ಸರ್ಕಾರಿ ಪಡ ಎಂದು ಇರುವ ಸ್ವತ್ತನ್ನು ಮಾರಾಟ ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿಯು ಖರೀದಿ ಮಾಡಿರುವ ಪತ್ರ ನೀಡಿದ್ದರು ಎಂದು ಉತ್ತರಿಸುತ್ತಾರೆ. ಸದರಿ ಆಸ್ತಿ ಪಿತ್ರಾರ್ಜಿತವಾಗಿ ಕೊಂಡಿರುವ ಆಸ್ತಿಯಾಗಿರುತ್ತದೆ. ಸದರಿ ಆಸ್ತಿ ಇನಾಮ್ತಿ ಜಮೀನಾಗಿರುತ್ತದೆ ಎಂದರೆ ಸರಿಯಲ್ಲ.

3. ಗುಮ್ಮಘಟ್ಟ ಗ್ರಾಮದ ಸ.ನಂ. 117/1 ಎ 1. ಪಹಣಿಗಳಲ್ಲಿ ಸರ್ಕಾರಿ ಪಡ ಎಂದು ನಮೂದಾಗಿಲ್ಲ ಸರ್ಕಾರಕ್ಕೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಸರ್ಕಾರಕ್ಕೆ ಎಂದು ನಮೂದಾಗಿದ್ದು ಕರಾರುಪತ್ರವನ್ನು ನಾವು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಡಿ. ಬೀಸಪ್ಪ ರವರು ನಾನು ಪ್ರಮಾಣಪತ್ರದಲ್ಲಿ ಬರೆಸಿರುವ ದಿನಾಂಕದಂದು ಬಂದಿರಲಿಲ್ಲ ಎಂದರೆ ಸರಿಯಲ್ಲ. ಕರಾರುಪತ್ರದಲ್ಲಿ X ಚಿಹ್ನೆ ಮಾಡಿರುವ ಕಾರಣ ಸ್ಥಳದಲ್ಲಿ ಸಹಿಗಳನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಹಿ ಮಾಡಬೇಕಾಗಿದ ಸ್ಥಳಗಳನ್ನು ಗುರುತಿಸಿ ನಾನೇ ಚಿಹ್ನೆ ಮಾಡಿರುತ್ತೇನೆ. ಆ ದಿನ ಬೀಸಪ್ಪ ರವರು ಬಂದಿರಲಿಲ್ಲ ಎಂದರೆ ಸರಿಯಲ್ಲ. ಕರಾರುಪತ್ರದಲ್ಲಿ ನಮೂದು ಮಾಡಿರುವ ಈ ಹಿಂದೆ ನೋಂದಣಿ ಪತ್ರ ಸಂಖ್ಯೆಃ 188/1998-99. ಸದರಿ ಸಂಖ್ಯೆಯನ್ನು ನನ್ನ ರಿಜಿಸ್ಟರ್ ನಲ್ಲಿ ನಮೂದು ಮಾಡಿರಬಹುದು. 6 ಎಕರೆ 8 ಗುಂಟೆ ಸ್ವತ್ತಿಗೆ ಒಟ್ಟಾರೆಯಾಗಿ ರೂ. 23,50,000 ಲಕ್ಷ ಬೆಲೆ ನಿಗದಿ ಮಾಡಿ ಊರಿನಲ್ಲಿ ಮಾತುಕತೆ ಮಾಡಿ ಬಂದಿರುವುದಾಗಿ ನನಗೆ ಹೇಳಿರುತ್ತಾರೆ. ನನ್ನ ಮುಂದೆ ವ್ಯವಹಾರವಾಗಿಲ್ಲ ಆದರೆ ಮಾರುಕಟ್ಟೆ ಮೌಲ್ಯದ ಬಗ್ಗೆ ನಾನು ವಿಚಾರ ಮಾಡಿರುತ್ತೇನೆ. ನಮ್ಮ ಕಚೇರಿಯಲ್ಲಿ ಕ್ರಯದ ಹಣವನ್ನು ನೀಡಿರುತ್ತಾರೆ. ನಮ್ಮ ಕಚೇರಿ ಇದೆ ಎಂದು ತೋರಿಸಲು ದಾಖಲೆ ಇಲ್ಲ. ವಾದಿಗೆ ಸಹಾಯ ಮಾಡಲು ನಾನು ಮತ್ತು ಚಿಕ್ಕ ಅಡಿವಣ್ಣ ರವರು ಸೇರಿ ಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಸರ್ಕಾರಿಕ್ಕೆ ಎಂದು

ನಮೂದಾಗಿದ್ದರೂ ದುರುದ್ದೇಶಪೂರ್ವಕವಾಗಿ ನಾವು ಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಬೀಸಪ್ಪ ರವರಿಗೆ ಅನಾರೋಗ್ಯವಿದ್ದು ಅವರು ಪಾವಗಡಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.